## ಬೃಹತ್ ಮೂರ್ತಿಗಳ ಉದ್ಘಾಟನಾ ಸಮಾರಂಭ

ಮಾರ್ಚ್ ೨೫ ಗುರುವಾರ ೨೦೦೪, ಅಲಸೂರಿನ ರಾಮಕೃಷ್ಣ ಮಠದ ಇತಿಹಾಸದಲ್ಲೇ ಒಂದು ಪ್ರಮುಖವಾದ ದಿನ. ಸುಮಾರು ೧೬ಅಡಿಗಳ ಎತ್ತರದ ಭಗವಾನ್ ಶಿವ ಮತ್ತು ಸ್ವಾಮಿ ವಿವೇಕಾನಂದರ ಮೂರ್ತಿಗಳನ್ನು ಅಂದು ಉದ್ಘಾಟಿಸಲಾಯಿತು. ಡಾ|| ಪ್ರಭುಶಂಕರ ಅವರು ಅತಿಥಿಗಳನ್ನು ಸ್ವಾಗತಿಸಿದರು. ಆಶ್ರಮದ ಬ್ರಹ್ಮಚಾರಿಗಳು ವೇದಘೋಷದೊಂದಿಗೆ ಸ್ವಾಗತ ಕೋರಿದರು. ಧ್ಯಾನದ ಭಂಗಿಯಲ್ಲಿ ಕುಳಿತಿರುವ ಶಿವನ ವಿಗ್ರಹವು ಸಣ್ಣ ಗುಡ್ಡೆಯ ಪಕ್ಕದಲ್ಲಿದ್ದು, ಆದರಲ್ಲಿ ಗಣೇಶ, ಶಿವಲಿಂಗ ಮತ್ತು ಪಾರ್ವತಿಯ ಸಣ್ಣ ಮೂರ್ತಿಗಳನ್ನು ಸ್ಥಾಪಿಸಲಾಗಿದೆ. ಸ್ವಾಮಿ ವಿವೇಕಾನಂದರ ಮೂರ್ತಿಯು ಸುಂದರವಾದ ತೋಟದ ಮಧ್ಯದಲ್ಲಿದೆ.





ಮುಖ್ಯ ಅತಿಥಿಗಳಾಗಿ ರಾಜ್ಯಪಾಲರಾದ ಶ್ರೀ ಟಿ. ಎನ್. ಚತುರ್ವೇದಿಯವರು, ಶ್ರೀಮತ್ ಸ್ವಾಮಿ ಹರ್ಷಾನಂದಜಿ ಮಹಾರಾಜ್ (ಅಧ್ಯಕ್ಷರು, ರಾಮಕೃಷ್ಣ ಮಠ, ಬಸವನಗುಡಿ, ಬೆಂಗಳೂರು) ಡಾ|| ನಂಜುಂಡಪ್ಪ (ಉಪಾಧ್ಯಕ್ಷರು, IRCS. ಕರ್ನಾಟಕ) ಹಾಗೂ ಶ್ರೀ ಭಾಸ್ಕರ್‌ರವರು (ನಿವೃತ್ತ D.G ಮತ್ತು I.G.P. ಕರ್ನಾಟಕ) ಆಗಮಿಸಿದ್ದರು.

ಉದ್ಘಾಟನಾ ಕಾರ್ಯಕ್ರಮವು ವಿದ್ವಾನ್ ಶ್ರೀ ಕೆ. ಗುರುರಾಜ್‌ರವರ ಭಜನೆಯೊಂದಿಗೆ ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ವೀರೇಶ್ವರ–ವಿವೇಕಾನಂದ ಎಂಬ ಸ್ಮರಣ ಸಂಚಿಕೆಯೊಂದನ್ನೂ ಮಾನ್ಯ ರಾಜ್ಯಪಾಲರು ಬಿಡುಗಡೆ ಮಾಡಿದರು. ಪೂಜ್ಯ ಹರ್ಷಾನಂದಜಿ ಮಹಾರಾಜ್‌ರವರು ಮಾತನಾಡುತ್ತಾ "ಇಂದು ತ್ಯಾಗವೆಂದಾಕ್ಷಣ ಜನರು ಭಾವಿಸುತ್ತಾರೆ, ತಲೆ ಬೋಳಿಸಿಕೊಂಡು, ಸಂನ್ಯಾಸಿಗಳಾಗುವುದು ಎಂದು. ಆದರೆ ಸ್ವಾಮಿ ವಿವೇಕಾನಂದರು ಹೇಳಿದ ತ್ಯಾಗದ ಅರ್ಥ ಸ್ವಾರ್ಥದ ತ್ಯಾಗ. ಇದು ಸೇವೆಗಾಗಿ ಮಾಡಿದ ತ್ಯಾಗವಾಗಿರಬೇಕು. ಈ ತ್ಯಾಗವು ಸಂನ್ಯಾಸಿಗಳಿಗೆ ಅಷ್ಟೇ ಅಲ್ಲ ಗೃಹಸ್ಥರಿಗೂ ಕೂಡ. ಇಂತಹ ಭವ್ಯ ಮೂರ್ತಿಗಳ ಉದ್ಘಾಟನಾ ಸಂದರ್ಭದಲ್ಲಿ ನಾವು ಸ್ವಾಮೀಜಿಯವರ ಆದರ್ಶದ ಈ ನುಡಿಗಳನ್ನು ಪಾಲಿಸಬೇಕು" ಎಂದು ಹೇಳಿದರು. ಅನಂತರ ಮಾತನಾಡಿದ ಶ್ರೀ ಭಾಸ್ಕರ್‌ರವರು "ಸ್ವಾಮಿ ವಿವೇಕಾನಂದರು ಹೇಳಿದಂತೆ ಅವರ ತತ್ವಗಳನ್ನು ಪಾಲಿಸುತ್ತಿರುವ ಈ ಆಶ್ರಮದಲ್ಲಿ ಒಂದು ಭಾಗದಲ್ಲಿ ಜೀವರಲ್ಲಿ ಶಿವನನ್ನು ಕಂಡು ಸೇವೆ ಮಾಡುವಲ್ಲಿನ ಕಾರ್ಯತತ್ಪರತೆ, ಮತ್ತೊಂದು ಭಾಗದಲ್ಲಿ ಆಧ್ಯಾತ್ಮಿಕ ಸಾಧನೆಗಳ ಸಂಗಮವನ್ನು ಕಾಣಬಹುದು. ಇಲ್ಲಿ ಈ ಸಂದರ್ಭದಲ್ಲಿ ನೆರೆದಿರುವ ಈ ಅಪಾರ ಜನಸ್ತೋಮವೇ ಅವರ ಕಾರ್ಯದಿಂದ ತೃಪ್ತರಾಗಿರುವುದಕ್ಕೆ ಸಾಕ್ಷಿ. ಮುಂದಿನ ವರ್ಷಗಳಲ್ಲಿ ಈ ಸಭಾಂಗಣವನ್ನು ಇನ್ನೂ ವಿಸ್ತರಿಸಬೇಕಾಗುತ್ತದೆ" ಎಂದರು. ನಂತರ ರಾಜ್ಯಪಾಲರು ಮಾತನಾಡುತ್ತ " ಈ ಆಶ್ರಮವು ನೂರು ವರ್ಷದಷ್ಟು ಹಳೆಯದೆಂದು ನನಗೆ ತಿಳಿದಿರಲಿಲ್ಲ. ಈ ಆಶ್ರಮದ ಕಾರ್ಯವು ಜನರ ಮನವನ್ನು ಗೆದ್ದಿವೆ" ಎಂದು ಶುಭ ಹಾರೈಸಿದರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದರು ಧನ್ಯವಾದಗಳನ್ನು ಅರ್ಪಿಸಿದರು.

◆

## ಮಹಿಳಾ ಭಕ್ತಸಮ್ಮೇಳನ

ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜನ್ಮದಿನೋತ್ಸವದ ಅಂಗವಾಗಿ ಬೆಂಗಳೂರಿನ ಶ್ರೀಶಾರದಾ ಮಠದವರು ಮಹಿಳೆಯರಿಗಾಗಿ ೨೮ ಮತ್ತು ೨೯ ಫೆಬ್ರವರಿಯಂದು ಎರಡುದಿನಗಳ ಭಕ್ತಸಮ್ಮೇಳನವನ್ನು ಬಹುವೈಭವದಿಂದ ನಡೆಸಿದರು. ಶ್ರೀಶಾರದಾ ಮಠ ಮತ್ತು ರಾಮಕೃಷ್ಣ ಶಾರದಾ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಪ್ರವ್ರಾಜಿಕಾ ಅಮಲಪ್ರಾಣಾ ಅವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ೨೫ ವರ್ಷಗಳ ಶಾರದಾ ಮಠದ ಇತಿಹಾಸದಲ್ಲಿ ಇದೇ ಮೊದಲನೆಯ ಬಾರಿ ಈ ಎರಡು ದಿನಗಳ ಮಹಿಳಾ ಭಕ್ತಸಮ್ಮೇಳನವು ಬಹಳ ಯಶಸ್ವಿಯಾಗಿ ನಡೆಯಿತು. ಮೈಸೂರು, ಬೆಂಗಳೂರು, ತುಮಕೂರು, ಚೆನ್ನೈ ಮುಂತಾದ ಪ್ರದೇಶಗಳಿಂದ ೬೦೦ ಜನ ಭಕ್ತಪ್ರತಿನಿಧಿಗಳು ಭಾಗವಹಿಸಿದ್ದರು. ೨ ದಿನವೂ ಪ್ರಾತಃಕಾಲ ೫.೩೦ಕ್ಕೆ ಉಷಾಕೀರ್ತನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಗೊಳ್ಳುತ್ತಿತ್ತು. ಅನಂತರ ಭಕ್ತಿಗೀತೆಗಳು, ಉಪನ್ಯಾಸಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಕಾರ್ಯಕ್ರಮದ ಮುಖ್ಯ ಅಂಗಗಳಾಗಿದ್ದವು. ಆಹ್ವಾನಿತ ಸಂನ್ಯಾಸಿನಿಯರೂ ವಿದ್ವನ್ಮಣಿಗಳೂ ದಿವ್ಯತ್ರಯರ ವಿಚಾರವಾಗಿಯೂ ಆಧ್ಯಾತ್ಮಿಕ ವಿಚಾರವಾಗಿಯೂ ಅತ್ಯಂತ ಪರಿಣಾಮಕಾರಿಯಾದ ಉಪನ್ಯಾಸಗಳನ್ನು ನೀಡಿದರು. ಬುದ್ಧಿಭಾವಗಳೆರಡಕ್ಕೂ ಪೌಷ್ಟಿಕ ಆಹಾರವನ್ನು ಒದಗಿಸುವುದರೊಂದಿಗೆ ಒಟ್ಟು ಕಾರ್ಯಕ್ರಮವು ತುಂಬ ವಿಶಿಷ್ಟವಾಗಿತ್ತು ಮತ್ತು ನೆರೆದ ಭಕ್ತರಿಗೆ ಒಂದು ಅಪೂರ್ವ ಅನುಭವವಾಗಿತ್ತು. ಊಟ ವಸತಿಗಳು ಅತ್ಯಂತ ಸಮರ್ಪಕವಾಗಿದ್ದವು. ದೇಶಾದ್ಯಂತ ಶ್ರೀಶಾರದಾ ಮಠದ ವಿವಿಧ ಕೇಂದ್ರಗಳಿಂದ ಒಟ್ಟು ೨೫ ಸಂನ್ಯಾಸಿನಿಯರು ಭಾಗವಹಿಸಿ ಸಮ್ಮೇಳನಕ್ಕೆ ಶೋಭೆಯನ್ನಿತ್ತರು. ದಿವ್ಯತ್ರಯರ ಭಾವಚಿತ್ರಗಳೊಂದಿಗೆ ಅವರ ಸಂದೇಶಗಳನ್ನು ಮೆರವಣಿಗೆಯಲ್ಲಿ ಕೂಡ ನೂರಾರು ಮಹಿಳೆಯರು ಕೊಂಡೊಯ್ದು ಜನರಿಗೆ ಅಪೂರ್ವ ಅನುಭವವನ್ನು ನೀಡಿದರು.

◆